-: ಕಾರ್ಯಕ್ರಮ :-

## 12 ಆಗಸ್ಟ್ 2023, ಶನಿವಾರ

ಬೆಳಿಗ್ಗೆ 8:00 ರಿಂದ 10.00 ಗಂಟೆ :
ಉಪಹಾರ ಮತ್ತು ನೊಂದಣಿ ಪ್ರಕ್ರಿಯೆ

ಬೆಳಿಗ್ಗೆ 11:00 ರಿಂದ 01.00 ಗಂಟೆ :
ಉದ್ಘಾಟನಾ ಸಮಾರಂಭ

ಮಧ್ಯಾಹ್ನ 01:00 ರಿಂದ 02:30 ಗಂಟೆ :
ಮಧ್ಯಾಹ್ನ ಭೋಜನ

ಮಧ್ಯಾಹ್ನ 03:00 ರಿಂದ 04:00 ಗಂಟೆ :
ಗೋಷ್ಠಿ ಒಂದು

ಸಂಜೆ 04.30 ರಿಂದ 05.30 ಗಂಟೆ :
ಗೋಷ್ಠಿ ಎರಡು

ಸಂಜೆ 05:30 ಗಂಟೆ : ಲಘು ಆಹಾರ

**ಸಂಜೆ 7.00 ಗಂಟೆಯಿಂದ
ಸಾಂಸ್ಕೃತಿಕ ಕಾರ್ಯಕ್ರಮ
ಜೊತೆ ಜೊತೆಗೆ ಭೋಜನದ ವ್ಯವಸ್ಥೆ
ಏರ್ಪಡಿಸಲಾಗಿರುತ್ತದೆ.**

## 13 ಆಗಸ್ಟ್ 2023, ಭಾನುವಾರ

ಬೆಳಿಗ್ಗೆ 8:00 ರಿಂದ 10.00 ಗಂಟೆ : ಉಪಹಾರ

ಬೆಳಿಗ್ಗೆ 10:00 ರಿಂದ 11.00 ಗಂಟೆ : ಗೋಷ್ಠಿ ಮೂರು

ಬೆಳಿಗ್ಗೆ 11:15 ರಿಂದ 12:15 ಗಂಟೆ : ಗೋಷ್ಠಿ ನಾಲ್ಕು

ಮಧ್ಯಾಹ್ನ 12:30 ರಿಂದ 01:30 ಗಂಟೆ :
ಸಮ್ಮೇಳನದಲ್ಲಿ ಮಂಡಿಸಿದ ಮುಖ್ಯ ನಿರ್ಣಯಗಳ ಬಗ್ಗೆ ಠರಾವುಗಳು

ಮಧ್ಯಾಹ್ನ 01.30 ರಿಂದ 02.30 ಗಂಟೆ : ಮಧ್ಯಾಹ್ನ ಭೋಜನ

ಮಧ್ಯಾಹ್ನ 03:00 ರಿಂದ ಸಂಜೆ 04:00 ಗಂಟೆ :
ಸಮಾರೋಪ ಸಮಾರಂಭ

ರಾಷ್ಟ್ರಗೀತೆಯೊಂದಿಗೆ ಸಮ್ಮೇಳನ ಕಾರ್ಯಕ್ರಮ ಮುಕ್ತಾಯ

**ಸಂಜೆ 4.15 ರಿಂದ : ನೆನಪಿನ ಕಾಣಿಕೆ ವಿತರಣೆ
(ಕಡ್ಡಾಯವಾಗಿ ಪ್ರತಿನಿಧಿ ಶುಲ್ಕದ
ಮೂಲ ರಸೀದಿಯನ್ನು ಹಾಜರುಪಡಿಸತಕ್ಕದ್ದು)**

**ಸಂಪರ್ಕ ಸಂಖ್ಯೆಗಳು:**

1. ಶ್ರೀ ರಮೇಶ್. ಎಸ್. ನಾಯ್ಕ – 8105421583
2. ಶ್ರೀ ಈಶಪ್ಪ – 8105915082
3. ಶ್ರೀ ಈರಣ್ಣ ಸೊನ್ನದ್ – 8197671081

## ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಬೆಂಗಳೂರು

| | |
|---|---|
| ಶ್ರೀ ವಿಶಾಲರಘು ಹೆಚ್. ಎಲ್ | ಅಧ್ಯಕ್ಷರು |
| ಶ್ರೀ ವಿನಯ್ ಬಿ. ಮಾಂಗಳೇಕರ್ | ಉಪಾಧ್ಯಕ್ಷರು |
| ಶ್ರೀ ಕೆ ಶಶಿಕಿರಣ್ ಶೆಟ್ಟಿ | ಅಡ್ವೋಕೇಟ್ ಜನರಲ್, ಪದನಿಮಿತ್ತ ಸದಸ್ಯರು |
| ಶ್ರೀ ವೈ.ಆರ್. ಸದಾಶಿವ ರೆಡ್ಡಿ | ಸಹ–ಅಧ್ಯಕ್ಷರು ಭಾರತೀಯ ವಕೀಲರ ಪರಿಷತ್ತು |
| ಶ್ರೀ ಕಿವಾಡ್ ಕಲ್ಮೇಶ್ವರ್ ತುಕಾರಾಮ್ | ಸದಸ್ಯರು |
| ಶ್ರೀ ದೇವರಾಜ ಎಂ | ಸದಸ್ಯರು |
| ಶ್ರೀ ಪದ್ಮ ಪ್ರಸಾದ್ ಹೆಗಡೆ @ ಪಿ.ಪಿ ಹೆಗಡೆ | ಸದಸ್ಯರು |
| ಶ್ರೀ ಶಿವಕುಮಾರ್ ಎನ್ | ಸದಸ್ಯರು |
| ಶ್ರೀ ರಾಜಣ್ಣ .ಆರ್ | ಸದಸ್ಯರು |
| ಶ್ರೀ ಕಾಮರೆಡ್ಡಿ ವೆಂಕರೆಡ್ಡಿ ದೇವರೆಡ್ಡಿ | ಸದಸ್ಯರು |
| ಶ್ರೀ ಶ್ರೀನಿವಾಸಬಾಬು ಎಲ್ | ಸದಸ್ಯರು |
| ಶ್ರೀ ಶ್ರೀನಿವಾಸ ಬಿ. ವಿ | ಸದಸ್ಯರು |
| ಶ್ರೀ ನಾಯಿಕ ಕೃಷ್ಣಪ್ಪ ಭೀಮಪ್ಪ | ಸದಸ್ಯರು |
| ಶ್ರೀ ಆಸೀಫ್ ಅಲಿ ಶೇಕ್ ಹುಸೇನ್ | ಸದಸ್ಯರು |
| ಶ್ರೀ ಗೌತಮ್‌ಚಂದ್ .ಎಸ್.ಎಫ್ | ಸದಸ್ಯರು |
| ಶ್ರೀ ಭೋಜೇಗೌಡ ಎಸ್. ಎಲ್ (ಎಂ.ಎಲ್.ಸಿ) | ಸದಸ್ಯರು |
| ಶ್ರೀ ಚಂದ್ರಮೌಳಿ. ಬಿ. ಆರ್ | ಸದಸ್ಯರು |
| ಶ್ರೀ ಮೊತಕಪಲ್ಲಿ ಕಾಶೀನಾಥ್ | ಸದಸ್ಯರು |
| ಶ್ರೀ ಮಗದುಮ್ ಆನಂದಕುಮಾರ್ ಅಪ್ಪು | ಸದಸ್ಯರು |
| ಶ್ರೀ ಮುನಿಯಪ್ಪ | ಸದಸ್ಯರು |
| ಶ್ರೀ ಬಸವರಾಜ್. ಎಸ್ | ಸದಸ್ಯರು |
| ಶ್ರೀ ಅನಿಲ್‌ಕುಮಾರ್ ಜೆ. ಎಮ್ | ಸದಸ್ಯರು |
| ಶ್ರೀ ಹರೀಶ್. ಎಸ್ | ಸದಸ್ಯರು |
| ಶ್ರೀ ಕೆ ಕೋಟೇಶ್ವರ್‌ರಾವ್ | ಸದಸ್ಯರು |
| ಶ್ರೀ ಮಧುಸೂಧನ್. ಎಮ್. ಎನ್ | ಸದಸ್ಯರು |
| ಶ್ರೀ ಮಿಟ್ಟಲ್‌ಕೋಡ್ ಸಿದ್ದಲಿಂಗಪ್ಪ ಶೇಖರಪ್ಪ | ಸದಸ್ಯರು |

ಸಾಧನೆಯ ಶಿಖರದತ್ತ
KARNATAKA STATE BAR COUNCIL
KSBC
BANGALORE
Achieving Excellence

# ಕರ್ನಾಟಕ ರಾಜ್ಯ ವಕೀಲರ ಪರಿಷತ್ತು, ಹಾಗೂ ಮೈಸೂರು ವಕೀಲರ ಸಂಘದ ಸಹಕಾರದೊಂದಿಗೆ

## ರಾಜ್ಯಮಟ್ಟದ ಹತ್ತನೆ ವಕೀಲರ ಸಮ್ಮೇಳನ

ದಿನಾಂಕ:
12-08-2023 ಶನಿವಾರ
ಮತ್ತು 13-08-2023 ಭಾನುವಾರ
ಸ್ಥಳ: ಮೈಸೂರು ಚಾಮುಂಡಿ ಒಳಾಂಗಣ ಕ್ರೀಡಾಂಗಣ



ಗೌರವಾನ್ವಿತ ವಕೀಲ ಬಾಂಧವರೇ,

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ವಕೀಲರ ಸ್ವಾಯತ್ತತ ಸಂಸ್ಥೆಯಾಗಿದ್ದು, ಕೇವಲ ವೃತ್ತಿಗೆ ಹೊಸದಾಗಿ ನೋಂದಾಯಿಸಿಕೊಳ್ಳುವ ವಕೀಲರಿಗೆ ಸನ್ನದ್ದು ನೀಡುವುದಕ್ಕೆ ಮಾತ್ರ ಸೀಮಿತವಾಗಿರದೆ, ಸಂಸ್ಥೆಯು ವಕೀಲರ ಸರ್ವತೋಮುಖ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಅವುಗಳಲ್ಲಿ ಪ್ರಮುಖವಾಗಿ ವೃತ್ತಿ ನಿರ್ವಹಣೆಯಲ್ಲಿ ನೈಪುಣ್ಯತೆ ಹೆಚ್ಚಿಸಿಕೊಳ್ಳಲು ಅನುಭವಿ ಹಿರಿಯ ವಕೀಲರಿಂದ ಕಾರ್ಯಾಗಾರಗಳನ್ನು ರಾಜ್ಯಾದ್ಯಂತ ಏರ್ಪಡಿಸುತ್ತಾ ಬಂದಿರುತ್ತದೆ. ವಕೀಲರ ಕ್ಷೇಮಾಭಿವೃದ್ಧಿ ಹಾಗೂ ಆರ್ಥಿಕ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತಾ ಬಂದಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಕೀಲರುಗಳಿಗೆ, ವಕೀಲ ವೃತ್ತಿಯ ನೈಪುಣ್ಯತೆಯನ್ನು ಹೆಚ್ಚಿಸುವ ಸಲುವಾಗಿ ವಿಚಾರ ಸಂಕೀರ್ಣ, ಕಾರ್ಯಗಾರಗಳನ್ನು ಹಾಗೂ ನ್ಯಾಯಾಂಗ ಇಲಾಖೆಯಲ್ಲಿ ಸೇವೆ ಸಲ್ಲಿಸಲು ಇಚ್ಛಿಸುವ ಯುವ ವಕೀಲರುಗಳಿಗೆ ತರಬೇತಿ ಶಿಬಿರಗಳನ್ನು ಆಯೋಜಿಸಿರುವುದಕ್ಕೆ ತಾವು ಸಾಕ್ಷಿಯಾಗಿದ್ದೀರಿ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಒಂದು ಬಹುಮುಖ್ಯವಾದ ವಿಚಾರವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಹರ್ಷಿಸುತ್ತದೆ. ಕಳೆದ 14 ವರ್ಷಗಳ ನಂತರ ರಾಜ್ಯಮಟ್ಟದ ವಕೀಲರ ಸಮ್ಮೇಳನವನ್ನು ಮೈಸೂರಿನಲ್ಲಿ ಆಯೋಜಿಸಲಾಗಿದೆ. ರಾಜ್ಯದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಡೆಯುತ್ತಿರುವ ವಕೀಲರ ಸಮ್ಮೇಳನದಲ್ಲಿ ಸರಿ ಸುಮಾರು 8-10 ಸಾವಿರಕ್ಕೂ ಹೆಚ್ಚು ವಕೀಲರು ಭಾಗವಹಿಸುವ ನಿರೀಕ್ಷೆಯಿದೆ.

* ಪ್ರಸ್ತುತ, ರಾಜ್ಯ ವಕೀಲರ ಪರಿಷತ್ತಿನಲ್ಲಿ 1,25,000 (ಒಂದು ಲಕ್ಷದ ಇಪ್ಪತ್ತೈದು ಸಾವಿರ) ವಕೀಲರುಗಳು ನೊಂದಣಿಯಾಗಿದ್ದು, ವಕೀಲರ ಪರಿಷತ್ತಿನಡಿಯಲ್ಲಿ ರಾಜ್ಯಾದ್ಯಾಂತ 193 ವಕೀಲರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ದಿನೇ ದಿನೇ ವಕೀಲರುಗಳ ಸಂಖ್ಯೆಯೂ ಹೆಚ್ಚುತ್ತಿದ್ದು, ಪ್ರತಿ ವರುಷ ಎಂಟು ಸಾವಿರ ನೂತನ ವಕೀಲರುಗಳು ನೊಂದಣಿ ಯಾಗುತ್ತಿದ್ದು ಹಾಗೂ ನೊಂದಾವಣಿ ಪ್ರಕ್ರಿಯೆಯನ್ನು ಪ್ರತಿ ವಾರ ನಡೆಸಲು ರಾಜ್ಯ ವಕೀಲರ ಪರಿಷತ್ತಿನಲ್ಲಿ ಸೂಕ್ತ ಸ್ಥಳಾವಕಾಶವಿರದೇ, ಬೆಂಗಳೂರಿನ ಪ್ರೆಸ್ ಕ್ಲಬ್‌ನ ಒಳಾಂಗಣವನ್ನು ಸರಾಸರಿ 50,000/-(ರೂ. ಐವತ್ತು ಸಾವಿರ) ರೂಪಾಯಿಗಳ ಬಾಡಿಗೆಗೆ ಪಡೆದು ಕೊಳ್ಳಲಾಗುತ್ತಿದೆ. ಆಗಾಗಿ, ನೊಂದಾವಣಿ ಪ್ರಕ್ರಿಯೆಯನ್ನು ನಡೆಸಲು 1000 ಆಸನಗಳ ಸಾಮರ್ಥ್ಯವುಳ್ಳ ಸಭಾಂಗಣ ;
* ಕಾರ್ಯಕಾರಿ ಮಂಡಳಿಯ ಸಭೆಯ ಸಭಾಂಗಣ;
* ನಾಲ್ಕು ಶಿಸ್ತು ಪಾಲನ ಸಮಿತಿಗಳನ್ನು ನಡೆಸಲು ಸುಸಜ್ಜಿತವಾದ ನಾಲ್ಕು ನ್ಯಾಯಾಂಗ ಸಭಾಂಗಣ ;
* ವಕೀಲರ ಕ್ಷೇಮಾಭಿವೃದ್ಧಿ ಸಮಿತಿ ಕೊಠಡಿ ;
* ವಕೀಲರ ಆರೋಗ್ಯ ವಿಮೆ ಸಮಿತಿ ಕೊಠಡಿ ;
* ಯುವ ವಕೀಲರ ಹೆಚ್ಚಿನ ಪರಿಣಿತಿಗಾಗಿ ಸುಸಜ್ಜಿತವಾದ ಲಾ ಅಕಾಡೆಮಿಯನ್ನು ಸ್ಥಾಪಿಸುವುದು ;
* ಬೃಹತ್ ವಕೀಲರ ಭವನ ನಿರ್ಮಾಣ ;

ಈ ಮೇಲ್ಕಂಡ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಒದಗಿಸಲು ರಾಜ್ಯ ವಕೀಲರ ಪರಿಷತ್ತಿನ ಸ್ವಂತ ಕಟ್ಟಡಕ್ಕೆ ಸೂಕ್ತ ಸ್ಥಳವಕಾಶವನ್ನು ಕಲ್ಪಿಸುವುದು ಅವಶ್ಯಕವಾಗಿದೆ.

ಸಮ್ಮೇಳನದಲ್ಲಿ ವಕೀಲರ ಪ್ರಮುಖ ಬೇಡಿಕೆಯಾಗಿರುವ "ವಕೀಲರ ಸಂರಕ್ಷಣಾ ಕಾಯ್ದೆ" ಜಾರಿಯ ಕುರಿತು, ವಕೀಲರಿಗೆ ಹಾಗೂ ಅವರ ಕುಟುಂಬದವರಿಗೆ " ಆರೋಗ್ಯ ವಿಮೆ" ಜಾರಿಗೊಳಿಸುವುದು, ವಕೀಲರ ಕಲ್ಯಾಣ ನಿಧಿ ಕಾಯ್ದೆ ಅಡಿಯಲ್ಲಿ ಬರುವ "ಮರಣ ಪರಿಹಾರ, ವೈದ್ಯಕೀಯ ಪರಿಹಾರಗಳನ್ನು" ಹೆಚ್ಚಿಸುವ ಸಲುವಾಗಿ ರಾಜ್ಯ ಸರಕಾರಕ್ಕೆ ವಾರ್ಷಿಕ ಬಜೆಟ್ **(Budgetary Allocation)** ನಲ್ಲಿ ಅನುದಾನವನ್ನು ಮೀಸಲಿರಿಸುವುದಕ್ಕೆ ಒತ್ತಾಯಿಸುವುದು ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮ ಹಾಗೂ ಷರತ್ತುಗಳನ್ನು ವಕೀಲರಿಗೆ ಅನುಕೂಲವಾಗುವಂತೆ ತಿದ್ದುಪಡಿ ತರುವುದು ಮತ್ತು ಸಿವಿಲ್ ನ್ಯಾಯಾಧೀಶರ ಹುದ್ದೆಯ ನೇಮಕಾತಿ ಅರ್ಹತೆಯಲ್ಲಿ ಕನಿಷ್ಠ ಮೂರು ವರ್ಷ ವೃತ್ತಿ ಅನುಭವದ ಪರಿಗಣನೆ, ವಕೀಲರ ಸಮಗ್ರ ಶ್ರೇಯೋಭಿವೃದ್ಧಿ ಮತ್ತು ಹಿತಕ್ಕಾಗಿ ತೆಗೆದುಕೊಳ್ಳಬೇಕಾದ ಅನೇಕ ವಿಚಾರಗಳನ್ನು ಎಲ್ಲಾ ವಕೀಲ ಸಮುದಾಯದವರು ಚರ್ಚಿಸಿ ನಿರ್ಣಯ ಕೈಗೊಂಡು ಜಾರಿ ಮಾಡುವ ಸಂಕಲ್ಪದೊಂದಿಗೆ ಈ ಸಮ್ಮೇಳನವನ್ನು ಆಯೋಜಿಸಲಾಗಿರುತ್ತದೆ.

ಈ ಸಮ್ಮೇಳನದಲ್ಲಿ ಗೋಷ್ಠಿಗಳನ್ನು ಏರ್ಪಡಿಸಿ, ವಕೀಲರಿಗೆ ಅನುಕೂಲವಾಗುವಂತಹ ವಿಷಯಗಳನ್ನು ನ್ಯಾಯಾಧೀಶರಿಂದ ಹಾಗೂ ಪರಿಣಿತ ಹಿರಿಯ ವಕೀಲರಿಂದ ಚರ್ಚಿಸಿ ನಿರ್ಣಯ ಕೈಗೊಂಡು, ಅವುಗಳ ಬಗ್ಗೆ ಠರಾವುಗಳನ್ನು ಮಂಡಿಸುವುದು ಪ್ರಮುಖ ಉದ್ದೇಶವಾಗಿದೆ.

ಮೈಸೂರಿನಲ್ಲಿ ನಡೆಯುವ ಈ ಸಮ್ಮೇಳನದಲ್ಲಿ ರಾಜ್ಯದ ಸರ್ವೋಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯ ಮೂರ್ತಿಗಳು, ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಗೌರವಾನ್ವಿತ ಮುಖ್ಯನ್ಯಾಯಮೂರ್ತಿಗಳು ಹಾಗೂ ಗೌರವಾನ್ವಿತ ಇತರೆ ನ್ಯಾಯಮೂರ್ತಿಗಳು, ಸನ್ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಉಪಮುಖ್ಯಮಂತ್ರಿಗಳು, ಕಾನೂನು, ಲೋಕೋಪಯೋಗಿ, ಸಮಾಜ ಕಲ್ಯಾಣ ಸಚಿವರುಗಳು, ರಾಜ್ಯ ಸರಕಾರದ ಸಚಿವರುಗಳು ಹಾಗೂ ಇನ್ನಿತರ ನ್ಯಾಯಾಲಯಗಳ ನ್ಯಾಯಾಧೀಶರುಗಳು, ಹಿರಿಯ ವಕೀಲರುಗಳು, ಕಾನೂನು ತಜ್ಞರು, ಸಾಮಾಜಿಕ ಕಾರ್ಯಕರ್ತರು, ಚಿಂತಕರು ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಬಹು ನಿರೀಕ್ಷಿತ ಸಮ್ಮೇಳನದಲ್ಲಿ ರಾಜ್ಯದ ಎಲ್ಲಾ ವಕೀಲ ಬಂಧುಗಳು ಪಾಲ್ಗೊಳ್ಳುವಂತೆ ವಿನಮ್ರವಾಗಿ ಮನವಿ ಮಾಡುತ್ತೇವೆ.

ಈ ಸಮ್ಮೇಳನವನ್ನು ಮೈಸೂರು ನಗರದಲ್ಲಿ ಆಯೋಜಿಸಿರುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ, ಭಾರತೀಯ ವಕೀಲರ ಪರಿಷತ್ತು, ಮೈಸೂರು ವಕೀಲರ ಸಂಘ ಮತ್ತು ಆ ಜಿಲ್ಲೆಯ ಎಲ್ಲಾ ತಾಲೂಕು ವಕೀಲರ ಸಂಘಗಳು ಸರ್ವ ರೀತಿಯಲ್ಲಿ ಸಮ್ಮೇಳನದ ಯಶಸ್ವಿಗೆ ಸಹಕಾರ ನೀಡುತ್ತಿರುವುದಕ್ಕೆ ರಾಜ್ಯ ವಕೀಲರ ಪರಿಷತ್ತು ಅಭಾರಿಯಾಗಿದೆ.

ಈ ಹಿನ್ನಲೆಯಲ್ಲಿ ತಾವೆಲ್ಲರೂ ಈ ಸಮ್ಮೇಳನದಲ್ಲಿ ಭಾಗವಹಿಸಿ, ಯಶಸ್ವಿಗೊಳಿಸುವ ಜೊತೆಗೆ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯುವ ನಮ್ಮ ಸಂಕಲ್ಪಕ್ಕೆ ಸಹಕರಿಸಬೇಕೆಂದು ಪ್ರೀತಿಪೂರ್ವಕವಾಗಿ ಕೋರುತ್ತೇವೆ.

ಅಧ್ಯಕ್ಷರು / ಉಪಾಧ್ಯಕ್ಷರು/ಸರ್ವ ಸದಸ್ಯರು
ಕರ್ನಾಟಕ ರಾಜ್ಯ ವಕೀಲರ ಪರಿಷತ್ತು

## ಗಮನಿಸಬೇಕಾದ ಅಂಶಗಳು

1. ಪ್ರತಿನಿಧಿ ಶುಲ್ಕ:- ರೂ. 1,000/- (ಒಂದು ಸಾವಿರ) ತಮ್ಮ ವಕೀಲರ ಸಂಘಗಳಲ್ಲಿ ಪಾವತಿಸಿ ರಶೀದಿ ಪಡೆಯತಕ್ಕದ್ದು.
2. ನೆನಪಿನ ಕಾಣಿಕೆ ಸ್ವೀಕರಿಸಲು ಪ್ರತಿನಿಧಿ ಶುಲ್ಕದ ಮೂಲ ರಸೀದಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು
3. ಗೌರವಾನ್ವಿತ ಪ್ರತಿನಿಧಿಗಳು ತಮ್ಮ ವಸತಿ ಸೌಕರ್ಯವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿ ಕೊಳ್ಳಬೇಕಾಗಿ ವಿನಂತಿ. ಮೈಸೂರಿನಲ್ಲಿ ಇರುವ ಹೋಟೆಲ್‌ಗಳ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳ ವಿವರಗಳನ್ನು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ವೆಬ್‌ಸೈಟ್‌ನಲ್ಲಿ ತಮ್ಮ ಅವಗಾಹನೆಗಾಗಿ ಪ್ರಕಟಿಸಲಾಗಿದೆ.

## ಮೈಸೂರಿನ ಪ್ರೇಕ್ಷಣೀಯ ಸ್ಥಳಗಳು

ಮೈಸೂರು ನಗರ ಐತಿಹಾಸಿಕ ಹಾಗೂ ಪಾರಂಪರಿಕ ನಗರವಾಗಿದ್ದು, ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿದೆ. ಅವುಗಳಲ್ಲಿ ಅರಮನೆ, ಚಾಮುಂಡಿ ಬೆಟ್ಟ, ಮೃಗಾಲಯ, ರಂಗನತಿಟ್ಟು ಪಕ್ಷಿದಾಮ, ಬೃಂದಾವನ ಉದ್ಯಾನವನ ನಂಜನಗೂಡು (ಕೆ.ಆರ್.ಎಸ್), ಜಿ.ಆರ್.ಎಸ್ ಫ್ಯಾಂಟಸಿ ಪಾರ್ಕ್, ಸುತ್ತೂರು ಮಠ, ಬಂಡೀಪುರ ಹಾಗೂ ಕಾಕನಕೋಟೆ ವನ್ಯಧಾಮಗಳು ಮತ್ತು ಹಿಮದ್ ಗೋಪಾಲಸ್ವಾಮಿ ದೇವಸ್ಥಾನ ಪ್ರಮುಖವಾಗಿವೆ.

## ಸಮ್ಮೇಳನಕ್ಕೆ ಆಗಮಿಸುವ ಎಲ್ಲಾ ಪ್ರತಿನಿಧಿಗಳಿಗೆ ಸುಸ್ವಾಗತ

